ದಿಃ 20.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ವಿ.ಯ್ಯು. ವಕೀಲರಿಂದ ,**

1. ಪ್ರತಿವಾದಿ ಹಾಗೂ ಆತನ ಸಹೋದರರ ನಡುವೆ ಅವರ ತಂದೆಯ ಮರಣದ ನಂತರ ವಿಭಾಗ ಆಗಿರುತ್ತದೆ. ಸದರಿ ವರ್ಷ ನನಗೆ ನೆನಪಿಲ್ಲ. ಸದರಿ ವಿಭಾಗದಲ್ಲಿ ನಾನು ಭಾಗಿಯಾಗಿರಲಿಲ್ಲ. ಸದರಿ ವಿಭಾಗ 6 ಎಕರೆ ಜಮೀನು ಹಾಗೂ ಮನೆಯ ಸಂಬಂಧ ಆಗಿರುತ್ತದೆ. ಸದರಿ ಜಮೀನು ಬೊಮ್ಮನಕಟ್ಟೆಯಲ್ಲಿ ಇರುತ್ತದೆ. ಸದಿರಿ ಜಮೀನಿನ ಸರ್ವೆ ನಂಬರ್ ನನಗೆ ತಿಳಿದಿಲ್ಲ. ಸದರಿ ಜಮೀನಿನ ಹಂಚಿಕೆ ಯಾರ ಯಾರ ನಡುವೆ ಆಗಿರುತ್ತದೆ ನನಗೆ ತಿಳಿದಿಲ್ಲ. 1 ನೇ ವಾದಿಯ ಗಂಡ ಕೆ.ಇ.ಬಿ ಲೈನ್ಮೆನ್ ಆಗಿದ್ದರು ಎಂದರೆ ಸರಿ. ಆತ ಎಲ್ಲಿ ಎಲ್ಲಿ ಸೇವೆ ಸಲ್ಲಿಸಿದ್ದರು ನನಗೆ ತಿಳಿದಿಲ್ಲ. ಆತ ಸುಮಾರು 3 – 4 ಕಡೆ ಸೇವೆ ಸಲ್ಲಿಸಿರಬಹುದು. ಆ ಸಮಯ ಆತ ಅಲ್ಲಿಯೇ ವಾಸ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತ ಭದ್ರಾವತಿಯಿಂದ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ಖುದ್ದು ನೋಡಿರುತ್ತೇನೆ. ಆತ ಎಷ್ಟು ಸಮಯಕ್ಕೆ ಹೋಗಿ ಬರುತ್ತಿದ್ದರು ನನಗೆ ತಿಳಿದಿಲ್ಲ. ವಾದಿಯರ ಮಾತೃ ಭಾಷೆ ಉರ್ದು ಆಗಿರುತ್ತದೆ. 1 ನೇ ವಾದಿಯ ಗಂಡ ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು, ನಾನು ಅದನ್ನು ನೋಡಿರುತ್ತೇನೆ. ನಾನು 2008 ನೇ ಸಾಲಿನಲ್ಲಿ 1 ನೇ ವಾದಿಯ ಗಂಡನ ಸಹಿಯನ್ನು ನೋಡಿರುತ್ತೇನೆ. ಆತ ಉರ್ದು ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ವಾದಿ ಹಾಗೂ ಪ್ರತಿವಾದಿಯರು ದಾವಾ ಸ್ವತ್ತಿನ ಸಂಬಂಧ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡಿರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಸ್ವತ್ತು ಹಿರಿಯೂರು ಗ್ರಾಮ ಪಂಚಾಯತಿ

ವ್ಯಾಪ್ತಿಗೆ ಬರುತ್ತದೆ. ದಾವಾ ಸ್ವತ್ತಿನ ಖಾತೆ ಯಾರ ಹೆಸರಿಗೆ ಇರುತ್ತದೆ ನನಗೆ ತಿಳಿದಿಲ್ಲ. ಅದು 80 X 52 ಅಡಿ ಇರುತ್ತದೆ ಎಂದರೆ ಸರಿ. ಅದರ ಚೆಕ್ಕುಬಂದಿ ದಾವೆಯಲ್ಲಿ ತಿಳಿಸಿರುವಂತೆ ಇರುತ್ತದೆ ಎಂದರೆ ಸರಿ. ವಾದಿಯರು ದಾವಾ ಸ್ವತ್ತಿಗೆ ಕಂದಾಯ ಪಾವತಿಸಿರುತ್ತಾರೆಯೇ ಇಲ್ಲವೇ ನನಗೆ ತಿಳಿದಿಲ್ಲ.

3. 1985 ರಲ್ಲಿ 1 ನೇ ವಾದಿಯ ಗಂಡ ಪ್ರತಿವಾದಿಯಿಂದ ಹಣ ಪಡೆದು ದಾವಾ ಸ್ವತ್ತಿನ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣ ವಾದಿಯರು ಈವರೆಗೆ ದಾವಾ ಸ್ವತ್ತಿನ ಮೇಲೆ ಹಕ್ಕನ್ನು ಪ್ರತಿಪಾದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಆ ಸಂಬಂಧ ನಾನು ದಾಖಲೆ ನೋಡಿರುವುದಿಲ್ಲ. ಈ ದಾವೆಯ ಸಂಗತಿ ನನಗೆ ಏನು ತಿಳಿಯದೇ ಇದ್ದರು ವಾದಿಯರ ಮಾತುಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**